ಗ್ರಾಮ ಪಂಚಾಯತ್‌ಗಳು ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆ ಬಾಕಿ

887(253) ಶ್ರೀ ವಸಂತ ಬಂಗೇರಾ ಕೆ. (ಬೆಳ್ತಂಗಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್‌ಗಳಲ್ಲಿ 2009–10ರ ಸಾಲಿಗಿಂತ ಹಿಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಲು ಬಾಕಿ ಇರುವ ಆದಾಯ ತೆರಿಗೆ, ಮಾರಾಟ ತೆರಿಗೆ ಮತ್ತು ರಾಜ ಧನದ ಮೊತ್ತ ಎಷ್ಟು;

ಆ) 2009–10ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡಲು ಬಾಕಿ ಇರುವ ಆದಾಯ ತೆರಿಗೆ, ಮಾರಾಟ ತೆರಿಗೆ ಮತ್ತು ರಾಜ ಧನದ ಮೊತ್ತ ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್‌ಗಳಲ್ಲಿ 2009–10ರ ಸಾಲಿಗಿಂತ ಹಿಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಲು ಆದಾಯ ತೆರಿಗೆ ರೂ. 5,75,923.00 ಮಾರಾಟ ತೆರಿಗೆ ರೂ. 13,11,222.00 ಮತ್ತು ರಾಜ ಧನ ರೂ. 6,60,100.00 ಬಾಕಿ ಇರುತ್ತದೆ.

ಆ) 2009–10ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಬಾಕಿ ಇರುವ ಆದಾಯ ತೆರಿಗೆ ರೂ. 60,872.00 ಮಾರಾಟ ತೆರಿಗೆ ರೂ. 1,59,694.00 ಮತ್ತು ರಾಜಧನ ರೂ. 62,761.00

ಅನುಬಂಧ- III

ದಿನಾಂಕ: 15-3-2011ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು.

ರಾಜ್ಯದಲ್ಲಿ ವಿಮಾನ ಇಳಿದಾಣಗಳ ನಿರ್ಮಾಣ

164(785) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿಮಾನ ಇಳಿದಾಣಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕಾರ್ಯವನ್ನು ಯಾವ ಯಾವ ಸಂಸ್ಥೆಗಳಿಗೆ ವಹಿಸಲಾಗಿದೆ. ಈ ಯೋಜನೆಯ ಕಾರ್ಯಗತಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಆ) ಈಗ ಈ ಯೋಜನೆ ಯಾವ ಹಂತದಲ್ಲಿದೆ ಹಾಗೂ ಯಾವ ಯಾವ ಸ್ಥಳಗಳಲ್ಲಿ ಕಾಮಗಾರಿ ಪ್ರಾರಂಭಗೊಂಡಿದೆ; ಇಲ್ಲಿಯವರೆಗೆ ಈ ಯೋಜನೆಗೆ ವೆಚ್ಚ ಮಾಡಿರುವ ಹಣವೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು);

ಇ) ಬೀದರ್‌ನಲ್ಲಿ ವಿಮಾನ ನಿಲ್ದಾಣದ ಪ್ರಾರಂಭದಲ್ಲಿ ವಿಳಂಬವಾಗುತ್ತಿರುವುದರಿಂದ ಬೀದರ್ ನಗರದಲ್ಲಾಗಲೀ ಅಥವಾ ಭಾಲ್ಕಿಯಲ್ಲಿಯಾಗಲೀ ಈ ವಿಮಾನ ಇಳಿದಾಣವನ್ನು ಅಭಿವೃದ್ಧಿಪಡಿಸಲಾಗುವುದೇ, ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ವಿಮಾನ ನಿಲ್ದಾಣಗಳಿಲ್ಲದೇ ಇರುವ ಜಿಲ್ಲೆಗಳಲ್ಲಿ ವಿಮಾನ ಇಳಿದಾಣ ನಿರ್ಮಿಸಲು ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ರಾಜ್ಯದ ಈ ಕೆಳಕಾಣಿಸಿದ ಜಿಲ್ಲೆಗಳಲ್ಲಿ 10 ವಿಮಾನ ಇಳಿದಾಣಗಳನ್ನು ತಲಾ ರೂ. 3.00 ರಿಂದ 4.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು 2008-09ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಈ ವಿಮಾನ ಇಳಿದಾಣಗಳು ಈ ರೀತಿಯಿದೆ.

1. ದಾವಣಗೆರೆ
2. ಬಾಗಲಕೋಟೆ
3. ಉಡುಪಿ
4. ಮಡಿಕೇರಿ / ಕುಶಾಲನಗರ
5. ಹಾವೇರಿ
6. ಗದಗ್
7. ಕಾರವಾರ
8. ಕೊಳ್ಳೇಗಾಲ
9. ಚಿಕ್ಕಮಗಳೂರು
10. ಚಿತ್ರದುರ್ಗ

ಈ ಪೈಕಿ ಗದಗ್, ಚಿಕ್ಕಮಗಳೂರು, ಬಾಗಲಕೋಟೆ, ಉಡುಪಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವಿಮಾನ ಇಳಿದಾಣ ನಿರ್ಮಿಸುವ ಕಾರ್ಯವನ್ನು ಕರ್ನಾಟಕ ಗೃಹಮಂಡಳಿಗೆ ವಹಿಸಲಾಗಿದೆ. ಉಳಿದಂತೆ, ಚಿತ್ರದುರ್ಗ, ಹಾವೇರಿ, ಕೊಳ್ಳೇಗಾಲ, ಕಾರವಾರ ಮತ್ತು ಕೊಡಗುಗಳಲ್ಲಿ ವಿಮಾನ ಇಳಿದಾಣಗಳನ್ನು ನಿರ್ಮಿಸಲು iDecK ಗೆ ವಹಿಸಲಾಗಿದೆ. ರಾಯಚೂರು, ಯಾದಗಿರ್ ಹಾಗೂ ಕೊಪ್ಪಳದಲ್ಲಿಯೂ ವಿಮಾನ ಇಳಿದಾಣಗಳನ್ನು ನಿರ್ಮಿಸಲು ಆನಂತರ ನಿರ್ಧರಿಸಿ ಅದನ್ನು ಸಹ ಕರ್ನಾಟಕ ಗೃಹಮಂಡಳಿ ಹಾಗೂ ಐಡೆಕ್‌ಗಳಿಗೆ ವಹಿಸಲಾಗಿದೆ.

ಆ) ಪ್ರತಿ ವಿಮಾನ ಇಳಿದಾಣ ನಿರ್ಮಾಣಕ್ಕೆ ಅಂದಾಜು ರೂ. 32.00 ರಿಂದ 35.00 ಕೋಟಿಗಳವರೆಗೆ ವೆಚ್ಚ ತಗಲುವುದೆಂದು ಕರ್ನಾಟಕ ಗೃಹ ಮಂಡಳಿಯು ಅಂದಾಜಿಸಿದ್ದು ಈ ವೆಚ್ಚವು 2008–09ರ ಆಯವ್ಯಯದಲ್ಲಿ ಘೋಷಿಸಿದ ಮೊತ್ತಕ್ಕಿಂತ ಬಹಳ ಹೆಚ್ಚಾಗಿರುತ್ತದೆ. ಆದುದರಿಂದ ಯೋಜನೆಯನ್ನು ಪುನರ್ ಪರಿಶೀಲಿಸಿ ಈ ಕುರಿತಂತೆ ರಾಜ್ಯದಲ್ಲಿ ಒಂದು ಹೊಸ ವಿಮಾನ ಇಳಿದಾಣ ನೀತಿಯನ್ನು ರೂಪಿಸಿ ಪರಿಶೀಲಿಸಲು ಕ್ರಮ ವಹಿಸಲಾಗುತ್ತಿದೆ.